189:80-81 ದಿನಾಂಕ 19-06-1980ರ ಪ್ರಕಾರ ಹಂಚಿಕೆ ಮಾಡಿರುತ್ತಾರೆ. ಈಗ ನಾಗಪ್ಪ ಈರಪ್ಪ ಜಾನ್ಮ್ ಇವರು 23-2-1981ರಂದು ಮೃತಪಟ್ಟಿರುವುದರಿಂದ ಅವರ ಯಾವತ್ತು ಆಸ್ತಿಗೆ ಸದರಿಯವರ ಹಿರಿಯ ಮಗ ಪುಂಡಲಿಕ ನಾಗಪ್ಪ ಹೆಬಳೆಯವರ ಹೆಸರಿಗೆ ಮ್ಯುಟೇಷನ್ ಎಂಟ್ರಿ ಕ್ರಮ ಸಂಖ್ಯೆ: 4237ರ ಪ್ರಕಾರ ನೊಂದಾಯಿಸಿರುವುದಾಗಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರರವರ ಪತ್ರ ಸಂಖ್ಯೆ: ಎಲ್ಎನ್ಡಿ. ಇಎಸ್ಆರ್ 1-189:83-84 ದಿನಾಂಕ: 20-12-1983ರಂದು ಆದೇಶ ಹೊರಡಿಸಿರುತ್ತಾರೆ.

ಮಾರೂರಿಗೆ ಪ್ರೌಢಶಾಲೆ ಮಂಜೂರಾತಿ

542 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದ್ರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರೂರಿಗೆ ಹೈಸ್ಕೂಲಿನ ಅವಶ್ಯಕತೆಯಿದ್ದು ಮಂಜೂರಾತಿ ನೀಡಲು ಮನವಿಗಳು ಬಂದಿದೆಯೇ?

ಆ) ಈ ವರ್ಷ ಅಲ್ಲಿಯ ಹೈಸ್ಕೂಲಿಗೆ ಮಂಜೂರಾತಿ ನೀಡಲಾಗುವುದೇ?

ಇ) ಅಲ್ಲಿಯ ಮಕ್ಕಳು ಪ್ರೌಢಶಿಕ್ಷಣಕ್ಕಾಗಿ ಆರು ಕಿಲೋಮೀಟರ್ಗಿಂತಲೂ ಹೆಚ್ಚಿನ ದೂರ ಶಾಲೆಗೆ ಹೋಗುವ ವಿಚಾರ ಸರಕಾರಕ್ಕೆ ತಿಳಿದಿದೆಯೇ?

ಈ) ಹತ್ತಿರ ಹೈಸ್ಕೂಲ್ಗಳಲ್ಲಿ ಸೀಟು ಸಿಗದೆ ಮಕ್ಕಳು ವಿದ್ಯಾಭ್ಯಾಸ ನಿಲ್ಲಿಸಬೇಕಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಹೌದು.

ಆ) 1994-95ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಇ) ಇಲ್ಲ.

ಈ) ಇಲ್ಲ.

ಸಂತ್ರಸ್ತ ಮೀನುಗಾರರಿಗೆ ಮೀನುಗಾರಿಕೆ ಜೆಟ್ಟಿ ನಿರ್ಮಾಣ

497 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವ ಮಂಗಳೂರು ಬಂದರು ನಿರ್ಮಾಣ ಹಂತದಲ್ಲಿ ಸಂತ್ರಸ್ಥ ಮೀನುಗಾರರಿಗೆ ಬಂದರು ಪ್ರದೇಶದ ವ್ಯಾಪ್ತಿಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಿಸಲು ಆಶ್ವಾಸನೆ ನೀಡಲಾಗಿದೆಯೇ?

ಆ) ಈ ಜೆಟ್ಟಿ ನಿರ್ಮಾಣಕ್ಕಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮಗಳೇನು?

ಇ) ಸಂತ್ರಸ್ಥ ಮೀನುಗಾರರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಹೌದು.